# ಸಿಸ್ಟರ್ ಗ್ರೇಸ್



ಈ ಮಹಿಳೆಯ ಹೆಸರು ಸಿಸ್ಟರ್ ಗ್ರೇಸ್. ಕೆಲವು ವಾರಗಳ ಹಿಂದೆಯಷ್ಟೇ ಹಾಂಗ್‌ಕಾಂಗ್‌ನಲ್ಲಿ ಜನಿಸಿದ್ದಾರೆ. ಕೋವಿಡ್–19 ಕಾಯಿಲೆಪೀಡಿತರ ಆರೈಕೆ ಮಾಡುವಲ್ಲಿ ಸಿದ್ಧಹಸ್ತರಂತೆ. ಪ್ರಪಂಚದ ತುಂಬಾ ಪ್ರಖ್ಯಾತರಾದ ಸೆಲೆಬ್ರಿಟಿ ಸೋಫಿಯಾ ಅವರ ಸಹೋದರಿ ಈಕೆ. ಇಷ್ಟೆಲ್ಲ ಹೇಳಿದ ಮೇಲೆ ಇವರ ಇನ್ನೊಂದು ಗುಟ್ಟನ್ನು ಇಲ್ಲಿಯೇ ಹೇಳಿಬಿಡಬೇಕು. ಈ ಸಿಸ್ಟರ್ ಗ್ರೇಸ್, ಮಾನವ ತದ್ರೂಪಿ ರೋಬಾಟ್!

ಕೋವಿಡ್ ಪೀಡಿತರನ್ನು, ಅದರಲ್ಲೂ ಹಿರಿಯ ನಾಗರಿಕರನ್ನು, ಈ ಸಿಸ್ಟರ್ ತುಂಬಾ ಕಾಳಜಿಯಿಂದ ನೋಡಿಕೊಳ್ಳುತ್ತಾರಂತೆ. ಐಸೋಲೇಷನ್‌ನಲ್ಲಿ ಇರುವ ರೋಗಿಗಳ ಹತ್ತಿರ ಉಳಿದವರು ಹೋಗಲು ಹಿಂಜರಿದರೆ ಈ ಸಿಸ್ಟರ್ ಧೈರ್ಯದಿಂದ ಅವರ ಬಳಿ ಹೋಗುತ್ತಾರಂತೆ. ನರ್ಸ್‌ಗಳಂತೆ ನೀಲಿಬಣ್ಣದ ಯೂನಿಫಾರ್ಮ್ ಧರಿಸಿರುವ ಗ್ರೇಸ್ ಮೇಲ್ನೋಟಕ್ಕೆ ಏಷ್ಯಾದ ಮಹಿಳೆಯಂತೆ ಗೋಚರಿಸುತ್ತಾರೆ.

ಮೈಬಣ್ಣ ಏಷ್ಯನ್ ಮಹಿಳೆಯರ ಹಾಗೇ ಇದೆ. ಕಂದುಬಣ್ಣದ ಕೂದಲನ್ನು ಹೊಂದಿದ್ದಾರೆ. ಆ ಕೂದಲನ್ನು ಬಾಬ್‌ಕಟ್ ಮಾಡಿಸಿಕೊಂಡಿದ್ದಾರೆ. ಕೆಂಪು ತುಟಿಗಳನ್ನು ಹೊಂದಿದ್ದರೂ ಅತಿ ಎನಿಸುವಷ್ಟು ಲಿಫ್‌ಸ್ಟಿಕ್ ಬಳಿದಿಲ್ಲ. ಕಣ್ಣುಗಳಲ್ಲಿ ಹೊಳಪು ತುಂಬಿದೆ. ತಲೆಯ ಒಳಗೆ ಮಿದುಳಿನ ಆಕಾರದಂತೆಯೇ ಸುರುಳಿ ಸುರುಳಿಯಾದ ವೈರ್ ಇಟ್ಟುಕೊಂಡಿದ್ದಾರೆ (ಅದೇನು ಅವರೊಡನೆ ಮಾತಿಗೆ ನಿಂತ ಯಾರಿಗೂ ಕಾಣುವುದಿಲ್ಲ). ಅವರ ಎದೆಯ ಮೇಲೆ ಥರ್ಮಲ್ ಕ್ಯಾಮೆರಾವನ್ನು ಇಟ್ಟುಕೊಂಡಿದ್ದು, ಎದುರಿನ ರೋಗಿಯ ದೇಹದ ತಾಪಮಾನ ಎಷ್ಟಿದೆ ಎಂಬುದನ್ನು ಡಿಜಿಟಲ್ ಆಗಿ ದಾಖಲು ಮಾಡಿಕೊಳ್ಳುತ್ತಾರೆ.

ಕೃತಕ ಬುದ್ಧಿಮತ್ತೆಯನ್ನು ಬಳಸಿ, ರೋಗಿಯ ಸ್ಥಿತಿಗತಿಯನ್ನು ಲೆಕ್ಕಹಾಕುವ ಗ್ರೇಸ್ ಅವರಿಗೆ ಮೂರು ಭಾಷೆಗಳು (ಇಂಗ್ಲಿಷ್, ಮ್ಯಾಂಡರೀನ್ ಮತ್ತು ಕ್ಯಾಂಟನೀಸ್) ಗೊತ್ತು. ರೋಗಿಗೆ ಈ ಮೂರರಲ್ಲಿ ಯಾವುದೇ ಭಾಷೆ ಗೊತ್ತಿದ್ದರೂ ಸಾಕು, ಗ್ರೇಸ್ ಅವರೊಂದಿಗೆ ಮುಕ್ತವಾಗಿ ಮಾತನಾಡುತ್ತಾರೆ.

ಹಾಂಗ್‌ಕಾಂಗ್‌ನಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ತನ್ನ ಸಹೋದರಿ ಸೋಫಿಯಾ (ಸಹಜ ಸಂವಹನದ ಮೊದಲ ಮಾನವತದ್ರೂಪಿ ರೋಬಾಟ್) ಜತೆ ಹಾಜರಾಗಿದ್ದ ಗ್ರೇಸ್, ಪತ್ರಕರ್ತರೊಂದಿಗೆ ಮಾತನಾಡಿದರು. ‘ಕಾಯಿಲೆಪೀಡಿತರನ್ನು ನಾನು ಭೇಟಿ ಮಾಡುತ್ತೇನೆ. ಅವರೊಂದಿಗೆ ಮುಕ್ತವಾಗಿ ಮಾತನಾಡುತ್ತಾ, ಅವರ ಮನಸ್ಸನ್ನು ಹಗುರ ಮಾಡುತ್ತೇನೆ. ಅವರ ದೈಹಿಕ ಸ್ಥಿತಿಯ ಕುರಿತು ಆರೋಗ್ಯ ಸೇವೆಯಲ್ಲಿ ನಿರತರಾದವರಿಗೆ ಮಾಹಿತಿಯನ್ನೂ ನೀಡುತ್ತೇನೆ’ ಎಂದು ಗ್ರೇಸ್ ಹೇಳುತ್ತಿದ್ದಾಗ, ಪತ್ರಕರ್ತರೆಲ್ಲ ನಿಬ್ಬೆರಗಾಗಿ ಅವರನ್ನು ನೋಡುತ್ತಿದ್ದರು.

ಅಂದಹಾಗೆ, ಗ್ರೇಸ್ ಅವರಿಗೆ ಜನ್ಮ ನೀಡಿದ್ದು ಹಾಂಗ್‌ಕಾಂಗ್‌ನ ಹನ್ಸನ್ ರೋಬಾಟಿಕ್ಸ್ ಸಂಸ್ಥೆ. ಸಂಸ್ಥೆಯ ಮುಖ್ಯಸ್ಥ ಡೇವಿಡ್ ಹನ್ಸನ್ ಅವರೂ ಈ ಸಿಸ್ಟರ್ ಅವರನ್ನು ಜಗತ್ತಿಗೆ ಪರಿಚಯಿಸುವ ಆ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು. ‘ಗ್ರೇಸ್ ಅವರ ಉಪಸ್ಥಿತಿಯಿಂದಾಗಿ ಆಸ್ಪತ್ರೆಗಳ ಮುಂಚೂಣಿ ಆರೋಗ್ಯ ಸೇವಕರ ಹೊರೆ ತುಂಬಾ ಕಡಿಮೆ ಆಗಲಿದೆ. ಅಲ್ಲದೆ, ಎಂತಹ ಗಂಭೀರ ಕಾಯಿಲೆಯಿಂದ ಬಳಲುತ್ತಿದ್ದವರ ಬಳಿಗೂ ಗ್ರೇಸ್ ಹೋಗಲು ಸಿದ್ಧ. ಒಬ್ಬಂಟಿಯಾಗಿರುವ ರೋಗಿಗಳ ಮಾತಿಗೆ ಕಿವಿಯಾಗುವ ಮೂಲಕ ಅವರ ನೋವನ್ನು ಶಮನ ಮಾಡುತ್ತಾರೆ’ ಎಂದು ಡೇವಿಡ್ ಹೇಳುತ್ತಾರೆ.

‘ಮನುಷ್ಯ ಸಂಬಂಧಗಳಿಗೆ ಎಲ್ಲೆಡೆ ತುಡಿತ. ಆದ್ದರಿಂದಲೇ ಗ್ರೇಸ್ ಅವರನ್ನು ರೂಪಿಸುವಾಗ ಆಂಗಿಕ ಹಾವಭಾವಗಳ ಮೂಲಕವೂ ಎದುರಿನವರಿಗೆ ಸ್ಪಂದಿಸುವಂತೆ ನೋಡಿಕೊಂಡಿದ್ದೇವೆ. ಎದುರಿನವರ ಮಾತುಗಳಿಗೆ ತಕ್ಕಂತೆ ಗ್ರೇಸ್ ಅವರ ಮುಖದ ಗೆರೆಗಳು ಬದಲಾಗುವುದನ್ನು ನೀವು ಗಮನಿಸಬಹುದು. ಮುಂದೆ ಇರುವವರು ಏನಾದರೂ ಜೋಕ್ ಮಾಡಿದರೆ ಸಿಸ್ಟರ್‌ಗೆ ನಗುವೂ ಬರುತ್ತದೆ’ ಎಂದು ವಿವರಿಸುತ್ತಾರೆ.

ಗ್ರೇಸ್ ಅವರೇನೋ ಈಗ ಸೇವೆಗೆ ಸಿದ್ಧವಾಗಿದ್ದಾರೆ. ಯಾವ ಆಸ್ಪತ್ರೆಗಳಲ್ಲಿ ಅವರನ್ನು ನೋಡಿ, ಅವರೊಡನೆ ಮಾತನಾಡಬಹುದು? ಹನ್ಸನ್ ಸಂಸ್ಥೆಯು ಈಗ ಗ್ರೇಸ್ ಅವರ ಕಾರ್ಯಕ್ಷಮತೆಯನ್ನು ಜಗತ್ತಿನ ಮುಂದೆ ತೋರುತ್ತಿದೆ. ಎಲ್ಲೆಲ್ಲಿಂದ ಬೇಡಿಕೆ ಬರುವುದೋ ಅಲ್ಲೆಲ್ಲ ತದ್ರೂಪಿ ಗ್ರೇಸ್‌ರನ್ನು ಕಳುಹಿಸಲು ಅದು ಸಿದ್ಧವಿದೆ.

ಗ್ರೇಸ್ ಅವರ ಸೃಷ್ಟಿಗೆ ಸಿಕ್ಕಾಪಟ್ಟೆ ಖರ್ಚಾಯಿತೇ? ಡೇವಿಡ್ ಅವರ ಮುಂದೆ ಈ ಪ್ರಶ್ನೆ ಇಟ್ಟರೆ, ಅವರೊಮ್ಮೆ ನಕ್ಕು ಉತ್ತರಿಸುತ್ತಾರೆ: ‘ಒಂದು ಲಕ್ಷುರಿ ಕಾರಿನ ಬೆಲೆಯಷ್ಟು ಹಣ ಖರ್ಚಾಗಿದೆ. ಒಂದೊಮ್ಮೆ ನೂರಾರು ಇಲ್ಲವೆ ಸಾವಿರಾರು ಗ್ರೇಸ್‌ರನ್ನು ಸೃಷ್ಟಿಸಲು ಬೇಡಿಕೆ ಬಂದರೆ ಖರ್ಚಿನ ಪ್ರಮಾಣ ಬಹುಪಾಲು ತಗ್ಗಲಿದೆ.’

ಗ್ರೇಸ್ ಸಿಸ್ಟರ್ ಅವರ ಇನ್ನೊಂದು ಸದ್ಗುಣವೆಂದರೆ ರೋಗಿಯ ಮಾನಸಿಕ ಒತ್ತಡವನ್ನೂ ಕಡಿಮೆ ಮಾಡುವಂತಹ ಕೌಶಲವನ್ನು ಹೊಂದಿರುವುದು. ರೋಗಿಯು ತುಂಬಾ ಖಿನ್ನತೆಗೆ ಒಳಗಾಗಿದ್ದರೆ ಈ ಸಿಸ್ಟರ್ ಗಂಟೆಗಟ್ಟಲೆ ಅವರ ಮುಂದೆ ನಿಂತು ಕೌನ್ಸೆಲಿಂಗ್ ಬೇರೆ ಮಾಡುತ್ತಾರಂತೆ.

ಕಾಯಿಲೆಯಿಂದ ಪೀಡಿತರಾದವರು, ಬಾಳಿನ ಸಂಧ್ಯಾಕಾಲದಲ್ಲಿ ದಿನಗಳನ್ನು ನೂಕುತ್ತಿರುವವರು ಒಂದು ಮಾನವೀಯ ಸ್ಪರ್ಶಕ್ಕಾಗಿ ಹಾತೊರೆಯುವುದುಂಟು. ಆದರೆ, ಕೊರೊನಾ ವೈರಾಣು ಯಾರನ್ನೂ ಹತ್ತಿರಕ್ಕೆ ಹೋಗಲು ಬಿಡುತ್ತಿಲ್ಲ. ಹಾಸಿಗೆ ಮೇಲೆ ಬಿದ್ದವರು ನಮ್ಮ ಅಪ್ಪ, ನಮ್ಮ ಅಮ್ಮ ಎನ್ನುವುದನ್ನೂ ಮರೆತು ದೂರವೇ ನಿಲ್ಲುವಷ್ಟು ಪರಿಸ್ಥಿತಿ ಹದಗೆಟ್ಟಿದೆ. ಇಂತಹ ಹೊತ್ತಿನಲ್ಲಿ ಮಾನವೀಯ ಸ್ಪರ್ಶವನ್ನು ನೀಡಲು, ಸಾಂತ್ವನದ ಮಾತು ಹೇಳಲು ಯಂತ್ರಗಳೇ ಸೃಷ್ಟಿಯಾಗಿರುವುದು ಮನುಕುಲದ ಉನ್ನತಿಯೋ ಅವನತಿಯೋ?

■ ಪ್ರವೀಣ ಕುಲಕರ್ಣಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65